## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಲಕ್ಷ್ಮೀನರಸಿಂಹಸ್ವಾಮಿ, ಪತ್ರಾಂಕಿತ ವ್ಯವಸ್ಥಾಪಕರು, ಪಂಚಾಯತ್ ರಾಜ್ ಆಯುಕ್ತಾಲಯ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 12ರ ಇಲಾಖಾ ವಿಚಾರಣೆ ಕುರಿತು– ಅಂತಿಮ ಆದೇಶ.

ಓದಲಾಗಿದೆ:
1. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 12ರ ಅನುಸಾರ ಆರೋಪ ಪಟ್ಟಿ ಸಂಖ್ಯೆ:ಗ್ರಾಅಪ 41 ಕೆ.ಎಸ್.ಎಸ್ 2020, ದಿನಾಂಕ:09.11.2021
2. ಶ್ರೀ ಲಕ್ಷ್ಮೀನರಸಿಂಹಸ್ವಾಮಿ, ಇವರ ವಿವರಣೆ ದಿನಾಂಕ:26.11.2021.

**ಪ್ರಸ್ತಾವನೆ,**

ಶ್ರೀ ಗಂಗರಾಮ್ ಬಡೇರಿಯಾ, ಭಾ.ಆ.ಸೇ, ಇವರು ಜಿಲ್ಲಾ ಪಂಚಾಯತ್, ಕೋಲಾರ ಇಲ್ಲಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಗೂಲಿ ನೌಕರರನ್ನು ಅಕ್ರಮವಾಗಿ ಸಕ್ರಮಗೊಳಿಸಲು ಕಾರಣರಾಗಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಆರೋಪ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ:25.8.2016ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಿತ್ತು. ಸದರಿ ಅನಧಿಕೃತ ಟಿಪ್ಪಣಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳು-ಸಿ ಶಾಖೆಯಲ್ಲಿ ಹಿಂದಿನ ವಿಷಯ ನಿರ್ವಾಹಕರಾಗಿದ್ದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಇವರು ಮೂಲ ಕಡತದಲ್ಲಿ ಮಂಡಿಸುವ ಬದಲು ಭಾಗ ಕಡತದಲ್ಲಿರಿಸಿದ್ದು, ಸದರಿ ಅನಧಿಕೃತ ಟಿಪ್ಪಣಿಯ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದಾದ 4 ವರ್ಷಗಳ ನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ನವೆಂಬರ್-2020 ರಲ್ಲಿ ಶ್ರೀ ಗಂಗರಾಮ್ ಬಡೇರಿಯಾ ಇವರ ವಿರುದ್ಧ ಆರೋಪಪಟ್ಟಿ ತಯಾರಿಸಿ ಕಳುಹಿಸುವ ಸಂಬಂಧ ನೆನಪೋಲೆಯನ್ನು ಬರೆದಿದ್ದು, ಆಯುಕ್ತಾಲಯದಿಂದ ಕಡತ ಪಡೆದು ಮಂಡಿಸುವಷ್ಟರಲ್ಲಿ ಶ್ರೀ ಗಂಗಾರಾಮ್ ಬಡೇರಿಯಾ ಇವರು ದಿನಾಂಕ:30.11.2020ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆ. ಶ್ರೀ ಗಂಗಾರಾಮ್ ಬಡೇರಿಯಾ ಇವರ ವಿರುದ್ಧದ ಆರೋಪಗಳು 1996-97 ನೇ ಸಾಲಿನವುಗಳಾಗಿದ್ದು, ಅವರು ಈಗಾಗಲೇ ನಿವೃತ್ತಿ ಹೊಂದಿದ್ದರಿಂದ ಅಖಿಲ ಭಾರತ ಸೇವೆಗಳು (ಡಿ.ಸಿ.ಆರ್.ಬಿ) ನಿಯಮಗಳು 1958ರ ನಿಯಮದನ್ವಯ ಅವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಇದು ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಇವರ ಬೇಜವಾಬ್ದಾರಿತನದಿಂದ ಶ್ರೀ ಗಂಗಾರಾಮ್ ಬಡೇರಿಯಾ ಇವರು ಇಲಾಖಾ ಕ್ರಮ/ ವಿಚಾರಣೆಯಿಂದ ತಪ್ಪಿಸಿಕೊಂಡಿರುತ್ತಾರೆ ಎಂಬುದು ಕಂಡು

ಬಂದ ಹಿನ್ನೆಲೆಯಲ್ಲಿ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು 1957ರ ನಿಯಮ 12ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಉದ್ದೇಶಿಸಿ, ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:09.11.2021 ರಂದು ಆರೋಪ ಪಟ್ಟಿ, ಆರೋಪವನ್ನು ಸಾಬೀತುಪಡಿಸುವ ದಾಖಲೆಗಳೊಂದಿಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಇವರು ತಮ್ಮ ವಿರುದ್ಧದ ಆರೋಪಗಳ ಕುರಿತು ವಿವರಣೆ ಸಲ್ಲಿಸಿದ್ದು, ತಮ್ಮ ವಿವರಣೆಯಲ್ಲಿ ಶ್ರೀ ಗಂಗಾರಾಮ್ ಬಡೇರಿಯಾ, ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಪ್ರಸ್ತಾವನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳುಹಿಸಿದ ನಂತರ ಸಿ.ಆ.ಸು ಇಲಾಖೆಯು ಅನಧಿಕೃತ ಟಿಪ್ಪಣಿ ಬರೆದು ಆರೋಪ ಪಟ್ಟಿ ಸಲ್ಲಿಸಲು ಗ್ರಾ.ಅ.ಪಂ.ರಾಜ್ ಇಲಾಖೆಯನ್ನು ಕೋರಿತ್ತು. ಆ ಸಂದರ್ಭದಲ್ಲಿ ಈ ವಿಷಯದ ಕುರಿತು 2 ಕಡತಗಳು(ಮೂಲ ಹಾಗೂ ಭಾಗ) ಪರಿಶೀಲನೆಯಲ್ಲಿ ಇದ್ದುದರಿಂದ ಸದರಿ ಅ.ಟಿ ಯನ್ನು ಭಾಗ ಕಡತದಲ್ಲಿ ಇರಿಸಿ ಕಾರ್ಯದ ಒತ್ತಡದಿಂದ ಮುಂದಿನ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ. ಸಿ.ಆ.ಸು. ಇಲಾಖೆಯು ಸೂಕ್ತ ಹಿಂಬಾಲಿಕ ಕ್ರಮ ವಹಿಸಿ ಶ್ರೀ ಗಂಗಾರಾಮ್ ಬಡೇರಿಯಾ ಇವರಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಸಲ್ಲಿಸಿದ್ದಲ್ಲಿ ಈ ರೀತಿಯ ಲೋಪ ಉಂಟಾಗುತ್ತಿರಲಿಲ್ಲವೆಂದು, ಸಿ.ಆ.ಸು ಇಲಾಖೆಯಿಂದ ಶ್ರೀ ಗಂಗಾರಾಮ್ ಬಡೇರಿಯಾ ಇವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿ ಎಂಬ ಮಾಹಿತಿ ಪಡೆಯುವ ಸಲುವಾಗಿ ಸಿ.ಆ.ಸು.ಇ ಇಲಾಖೆಗೆ ನೆನಪೋಲೆ ಬರೆಯಲು ಕಡತ ಸಂಖ್ಯೆ: ಗ್ರಾಅಪ/ 275/ ಕೆ.ಎಸ್‌ಎಸ್ 2011ರಡಿಕೆ 285ರಲ್ಲಿ ತಾನು ಟಿಪ್ಪಣಿ ಮಂಡಿಸಿರುತ್ತೇನೆ ಒಂದು ವೇಳೆ ತಾನು ಮಂಡಿಸಿದ ಟಿಪ್ಪಣಿಯಂತೆ ನೆನಪೋಲೆ ಹೋಗಿದ್ದರೆ ತಕ್ಷಣದಲ್ಲಿ ಶ್ರೀ ಗಂಗಾರಾಮ್ ಬಡೇರಿಯಾ ಇವರ ವಿರುದ್ಧ ಆರೋಪ ಪಟ್ಟಿ ತಯಾರಿಸಿ ಕಳುಹಿಸಲು ಸಿ.ಆ.ಸು. ಇಲಾಖೆಯು ಗ್ರಾ.ಅ.ಪಂ.ರಾಜ್ ಇಲಾಖೆಯನ್ನು ಕೋರಿರುವ ವಿಷಯವು ತಮ್ಮ ಗಮನಕ್ಕೆ ಬಂದು ಮುಂದಿನ ಕ್ರಮಕ್ಕೆ ಅವಕಾಶವಾಗುತ್ತಿತ್ತೆಂದು, ಆದರೆ ಅಂದಿನ ಶಾಖಾಧಿಕಾರಿಗಳು ಕಡತವನ್ನು ಮುಕ್ತಾಯ ಮಾಡಲು ಶಿಫಾರಸ್ಸು ಮಾಡಿ ಅಂದಿನ ಅಧೀನ ಕಾರ್ಯದರ್ಶಿಗಳ ಅನುಮೋದನೆ ಪಡೆದು ಅವರ ಹಂತದಲ್ಲಿಯೇ ಕಡತವನ್ನು ಮುಕ್ತಾಯಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರಿದು, ತಾನು ಯಾವುದೇ ಉದ್ದೇಶ ಪೂರ್ವಕವಾಗಿ ಸಿ.ಆ.ಸು ಇಲಾಖೆಯ ದಿನಾಂಕ:25.08.2016 ಅ.ಟಿಯನ್ನು ಕಡತದಲ್ಲಿ ಮಂಡಿಸದೆ ವಿಳಂಬ ಮಾಡಿರುವುದಿಲ್ಲವೆಂದು ಕಣ್ತಪ್ಪಿನಿಂದ ಆಗಿರುವ ಲೋಪವನ್ನು ಮನ್ನಿಸಿ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ, ಹಿಂದಿನ ವಿಷಯ ನಿರ್ವಾಹಕರು ಇವರು ನೀಡಿರುವ ವಿವರಣೆಯು ಭಾಗಶಃ ಸಮರ್ಥನೀಯವೆಂದು ಕಂಡು ಬಂದರೂ ಸ್ವತಃ ಅವರೇ ಒಪ್ಪಿಕೊಂಡಿರುವಂತೆ ಮಹತ್ವದ ಸ್ವೀಕೃತಿಯನ್ನು

ಕಡತದಲ್ಲಿ ಮಂಡಿಸಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಇವರು ಒಬ್ಬ ವಿಷಯ ನಿರ್ವಾಹಕರಾಗಿದ್ದು, ಅವರು ಸ್ವೀಕರಿಸಿದ ಸ್ವೀಕೃತಿಗಳ ಗಂಭೀರತೆಯನ್ನು ಗಮನಿಸದೇ ಬೇಜವಾಬ್ದಾರಿತನದಿಂದ ಭಾಗ ಕಡತದಲ್ಲಿರಿಸಿರುವುದು ಸ್ಪಷ್ಟವಿರುತ್ತದೆ. ಶ್ರೀ ಗಂಗಾರಾಮ್ ಬಡೇರಿಯಾ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹಿಂದಿನ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಅನುಮೋದಿಸಿದ್ದು, ಸಿ.ಆ.ಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಆರೋಪ ಪಟ್ಟಿಯನ್ನು ಸಹ ಕಳುಹಿಸಬೇಕೆಂಬ ಬಗ್ಗೆ ಕನಿಷ್ಟ ಯೋಚನೆಯನ್ನು ಮಾಡದೇ ಕೇವಲ ಒಂದು ಅನಧಿಕೃತ ಟಿಪ್ಪಣಿ ಬರೆದು ಸುಮ್ಮನಾಗಿರುವುದು ಇವರ ಕರ್ತವ್ಯಲೋಪವಾಗಿರುತ್ತದೆ. ಅಲ್ಲದೆ, ಸಿ.ಆ.ಸು ಇಲಾಖೆಯಿಂದ ಬಂದಂತಹ ಅನಧಿಕೃತ ಟಿಪ್ಪಣಿಯನ್ನು ಕಡತದಲ್ಲಿ ಮಂಡಿಸಿರುವುದಿಲ್ಲ. ಈ ಕಾರಣಕ್ಕೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಇವರು ಸಿ.ಆ.ಸು ಇಲಾಖೆಯಿಂದ ಸ್ವೀಕೃತವಾದ ಅನಧಿಕೃತ ಟಿಪ್ಪಣಿಯನ್ನು ಪರಿಶೀಲಿಸಿ ಕಡತ ಮಂಡಿಸದೇ ವಿಫಲರಾಗಿರುವುದು ಸ್ಪಷ್ಟವಿರುವುದರಿಂದ ಸದರಿಯವರ ವಿರುದ್ಧದ ಆರೋಪವು ಸಾಬೀತಾಗುತ್ತದೆ ಎಂದು ಸರ್ಕಾರವು ನಿರ್ಣಯಿಸಿರುತ್ತದೆ. ಅದರಂತೆ, ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 41 ಕೆ.ಎಸ್.ಎಸ್ 2020(ಇ) ಬೆಂಗಳೂರು,ದಿನಾಂಕ:28.2.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ , ಶ್ರೀ ಲಕ್ಷ್ಮೀನರಸಿಂಹಸ್ವಾಮಿ, (ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಅಧಿಕಾರಿ) ಹಿಂದಿನ ವಿಷಯ ನಿರ್ವಾಹಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸೇವೆಗಳು-ಸಿ ಶಾಖೆ, ಹಾಲಿ ಪತ್ರಾಂಕಿತ ವ್ಯವಸ್ಥಾಪಕರು, ಪಂಚಾಯತ್ ರಾಜ್ ಆಯುಕ್ತಾಲಯ ಇವರ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8 (iii) ರಡಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಯಿಡಿಯುವ ದಂಡನೆ ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/02/2022
(ಬಾಲಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆಂಪೇಗೌಡ ರಸ್ತೆ, ಬೆಂಗಳೂರು
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು ಇಲಾಖೆ (ಸೇವೆಗಳು-1) ವಿಧಾನ ಸೌಧ, ಬೆಂಗಳೂರು.
4. ಶ್ರೀ ಲಕ್ಷ್ಮೀನರಸಿಂಹಸ್ವಾಮಿ, ಪತ್ರಾಂಕಿತ ವ್ಯವಸ್ಥಾಪಕರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
6. ಪ್ರಧಾನ ಕಾರ್ಯದರ್ಶಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು.
7. ಉಪ ಕಾರ್ಯದರ್ಶಿಯವರು (ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
8. ಶಾಖಾ ರಕ್ಷಣಾ ಕಡತ/ಕಂಪ್ಯೂಟರ್ ಸೆಲ್/ಹೆಚ್ಚುವರಿ ಪ್ರತಿ.